ಶ್ರೀ ಎಸ್. ಬಂಗಾರಪ್ಪ:- ಮಾನ್ಯ ಬಸವಲಿಂಗಪ್ಪನವರನ್ನು ಪರಿಚಯ ಮಾಡಿಕೊಟ್ಟಿದ್ದೇನೆ. ಆಮೇಲೆ ಮಾನ್ಯ ಅಜೀಜ್ ಸೇಠ್‌ರವರನ್ನು ನೀವು ಮರೆಯುವುದಕ್ಕೆ ಸಾಧ್ಯವಿಲ್ಲ. ಶ್ರೀಮಾನ್ ಅಜೀಜ್‌ಸೇಠ್ ಅವರು ಅತ್ಯಂತ ಹಿರಿಯರು. ಅವರನ್ನು ನಾನು ಸದನಕ್ಕೆ ಪರಿಚಯ ಮಾಡಿಕೊಡುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್:- ಅವರು ಈ ಕಡೆ ಇದ್ದಗಲೂ ಸಚಿವರಾಗಿದ್ದರು. ಆ ಕಡೆ ಇದ್ದಾಗಲೂ ಸಚಿವರಾಗಿದ್ದಾರೆ.

ಶ್ರೀ ಎಸ್. ಬಂಗಾರಪ್ಪ:- ಅತ್ಯಂತ ಹಿರಿಯರು ಹಾಗೂ ಸಹಕಾರ ಕ್ಷೇತ್ರದಲ್ಲಿ ದುಡಿದವರಾದ ಶ್ರೀ ಕೆ.ಹೆಚ್.ಪಾಟೀಲರನ್ನು ಪರಿಚಯ ಮಾಡಿಕೊಡುತ್ತಿದ್ದೇನೆ. ಅವರನ್ನು ಮತ್ತೊಂದು ಸಾರಿ ಪರಿಚಯ ಮಾಡಿಕೊಡುವುದು ಅನಾವಶ್ಯಕ. ಸದನದ ಅತ್ಯಂತ ಹಿರಿಯ ಸದಸ್ಯರಾದ ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರು ಮೊಟ್ಟ ಮೊದಲ ಬಾರಿಗೆ ಸಚಿವರಾಗಿದ್ದಾರೆ. ಅವರನ್ನು ಪರಿಚಯ ಮಾಡಿಕೊಡುತ್ತಿದ್ದೇನೆ. ನಂತರ ಮಾನ್ಯ ಶ್ರೀ ಜೆ. ಪುಟ್ಟಸ್ವಾಮಿಗೌಡರು ಸಚಿವರಾಗಿದ್ದವರು, ಮತ್ತೊಮ್ಮೆ ಕೂಡ ಅವರು ಸಚಿವರಾಗಿದ್ದಾರೆ. ಇದೇ ಸಂದರ್ಭದಲ್ಲಿ ಸರ್ಕಾರದ ಮುಖ್ಯ ಸಚೇತಕರಾಗಿ ನೂತನವಾಗಿ ನಾಮಕರಣಗೊಂಡಿರತಕ್ಕ ಧಾರವಾಡ ಜಿಲ್ಲೆಯ ಬ್ಯಾಡಗಿ ಕ್ಷೇತ್ರದ ಡಾ: ಹೆಚ್.ಡಿ. ಲಮಾಣಿಯವರನ್ನು ಈ ಸಭೆಗೆ ಪರಿಚಯ ಮಾಡಿಕೊಡುತ್ತಿದ್ದೇನೆ. ಇಷ್ಟು ಹೇಳಿ ಮಾನ್ಯ ಸಭಾಧ್ಯಕ್ಷರಿಗೆ ವಂದಿಸುತ್ತೇನೆ.

<u>ಗೈರು ಹಾಜರಿಗೆ ಅನುಮತಿ ಕೋರಿಕೆ</u>

ಅಧ್ಯಕ್ಷರು:- ಈ ಸದನದ ಮಾನ್ಯ ಸದಸ್ಯರಾದ ಸನ್ಮಾನ್ಯ ಶ್ರೀ ವೀರೇಂದ್ರ ಪಾಟೀಲ್‌ರವರು ಈಗಿನ ಆರೋಗ್ಯ ಪರಿಸ್ಥಿತಿಯಿಂದಾಗಿ ದಿನಾಂಕ 25-10-90ರಂದು ನಡೆಯಲಿರುವ ವಿಧಾನ ಸಭಾ ಅಧಿವೇಶನದಲ್ಲಿ ಹಾಜರಾಗಲು ಸಾಧ್ಯವಾಗುವುದಿಲ್ಲ ಎಂದು ನನಗೆ ಪತ್ರ ಬರೆದಿದ್ದಾರೆ. ಇದನ್ನು ಈ ಸದನದ ಗಮನಕ್ಕೆ ತರಬಯಸುತ್ತೇನೆ.

"ಶ್ರೀ ವೀರೇಂದ್ರ ಪಾಟೀಲರು ದಿನಾಂಕ: 25-10-90ರಂದು ಆನಾರೋಗ್ಯದ ನಿಮಿತ್ತ ಸದನಕ್ಕೆ ಗೈರು ಹಾಜರಾಗಲು ಅನುಮತಿಯನ್ನು ಕೊಡಬೇಕೆಂದು ಸದನವು ಅಪೇಕ್ಷಿಸುತ್ತದೆಯೇ?"

<u>ಯಾವ ಸದಸ್ಯರು ವಿರೋಧ ವ್ಯಕ್ತಪಡಿಸಲಿಲ್ಲ.</u>

ಅಧ್ಯಕ್ಷರು:- ಶ್ರೀ ವೀರೇಂದ್ರ ಪಾಟೀಲರವರಿಗೆ ಗೈರುಹಾಜರಾಗಲು ಅನುಮತಿಯನ್ನು ನೀಡಲಾಗಿದೆ.

<u>ಶ್ರೀ ವೀರೇಂದ್ರ ಪಾಟೀಲರವರಿಗೆ ಗೈರುಹಾಜರಾಗಲು ಅನುಮತಿ ನೀಡಲಾಯಿತು.</u>

ಅಧ್ಯಕ್ಷರು:- ಈಗ ಮಾನ್ಯ ಶ್ರೀ ಎಸ್. ಬಂಗಾರಪ್ಪನವರು ವಿಶ್ವಾಸ ಮತವನ್ನು ಕುರಿತ ನಿರ್ಣಯವನ್ನು ಮಂಡಿಸುತ್ತಾರೆ.

ಶ್ರೀ ಎಸ್. ಬಂಗಾರಪ್ಪ:- ಮಾನ್ಯ ಸಭಾಧ್ಯಕ್ಷರೆ, ನಾನು ತಮ್ಮ ಅಪ್ಪಣೆಯನ್ನು ಕೋರಿ ಈ ಕೆಳಕಂಡ ನಿರ್ಣಯವನ್ನು ಈ ಸದನದ ಒಪ್ಪಿಗೆಗೋಸ್ಕರ ಅಥವಾ ಅನುಮೋದನೆಗೋಸ್ಕರ ಮಂಡಿಸುತ್ತೇನೆ.

"ಈ ಸದನವು ಶ್ರಿ ಎಸ್. ಬಂಗಾರಪ್ಪ ಅವರ ನೇತೃತ್ವದ ಮಂತ್ರಿಮಂಡಲದಲ್ಲಿ ತನ್ನ ವಿಶ್ವಾಸವನ್ನು ವ್ಯಕ್ತಪಡಿಸುತ್ತದೆ."

(ಆಡಳಿತ ಪಕ್ಷದ ಸದಸ್ಯರು ಮೇಜು ಕುಟ್ಟಿ ತಮ್ಮ ಒಪ್ಪಿಗೆಯನ್ನು ವ್ಯಕ್ತಪಡಿಸಿದರು.)

ಶ್ರೀ ವಾಟಾಳ್ ನಾಗರಾಜ್:- ಇದು ನಮಗಂತೂ ಅರ್ಥವಾಗುತ್ತಿಲ್ಲ.

(ಗೊಂದಲ)